ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಕೊಳಗೇರಿ ನಿರ್ಮೂಲನೆ ಕುರಿತು

ಶ್ರೀ ಕವಟಗಿಮಠಮಹಾಂತೇಶಮಲ್ಲಿಕಾರ್ಜುನ (ಸ್ಥಳೀಯಸಂಸ್ಥೆಗಳ ಕ್ಷೇತ್ರ):-

201 (397) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಸತಿ ಇಲಾಖೆಯಲ್ಲಿರುವ ಕೊಳೆಗೇರಿ ನಿರ್ಮೂಲನೆ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಸಾಕಷ್ಟು ಯೋಜನೆಗಳನ್ನು ರೂಪಿಸಿ ಹಣಕಾಸು ಬಿಡುಗಡೆ ಮಾಡಿದ್ದು, ಅದರ ಸಂಪೂರ್ಣ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕೊಳೆಗೇರಿ ನಿರ್ಮೂಲನೆ ಮಾಡುವಲ್ಲಿ ಇರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಯಾವುವು; (ವಿವರವಾದ ಮಾಹಿತಿ ಒದಗಿಸುವುದು)

(ಇ) ಈ ವಿವಿಧ ಯೋಜನೆಗಳಡಿಯಲ್ಲಿ ಮೀಸಲಿಟ್ಟ ಹಾಗೂ ಬಿಡಗಡೆಯಾದ ಹಣಕಾಸಿನ ವಿವರವನ್ನು ಒದಗಿಸುವುದು;

(ಈ) ಈ ವಿವರವಾದ ಯೋಜನೆಗಳನ್ನು ಪೂರ್ತಿಗೊಳಿಸಲು ನಿಗದಿಪಡಿಸಲಾದ ಅವಧಿ ಎಷ್ಟು; ಈ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆಯೇ;

(ಉ) ಇಲ್ಲವಾದಲ್ಲಿ ಈ ಹಣದ ಸದ್ಬಳಕೆಯಾಗದೇ ಯೋಜನೆ ಕುಂಠಿತಗೊಳ್ಳಲು ಕಾರಣರಾದವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?